## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೇಶಲ ಕೇಸ ನಂಃ 32/2025

ಪಿಡಬ್ಲು :1 ಸಿಡಬ್ಲು :1

ಸಾಕ್ಷಿಯ ಹೆಸರು : ಶ್ರೀಮತಿ. ನೀಲವ್ವಾ ತಿಮ್ಮಣ್ಣವರ
ಗಂಡನ ಹೆಸರು : ಶ್ರೀ.ಈರಪ್ಪಾ ತಿಮ್ಮಣ್ಣವರ
ವಯಸ್ಸು : 50 ವರ್ಷ
ಉದ್ಯೋಗ : ತರಕಾರಿ ವ್ಯಾಪಾರ
ವಾಸ್ತವ್ಯ : ಬೈಲಹೊಂಗಲ, ಬೆಳಗಾವಿ
ದಿನಾಂಕ :14-05-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನನಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. ನನ್ನ ಇಬ್ಬರು ಹೆಣ್ಣುಮಕ್ಕಳಿಗೆ ಮದುವೆ ಆಗಿರುತ್ತದೆ. ಮನೆಯಲ್ಲಿ ನಾನು ಮತ್ತು ನನ್ನ ಮಗ ಮಾತ್ರ ಇರುತ್ತಿದ್ದೆವು. ಚಾಸಾ-12 ಗೀತಾ ಕೇರವಾಡ ನನ್ನ ತಂಗಿ. ಚಾಸಾ-13 ಅಮಿತ್ , ಚಾಸಾ-14 ಮಣಿಕಂಠ, ಚಾಸಾ-15 ವಿಠಲ ನನ್ನ ಮಗನ ಸ್ನೇಹಿತರು. ನಮ್ಮ ಊರಿನ ಶಾಲೆಯ ಹತ್ತಿರ ಚಾಸಾ-16 ಉದಯ ಕುಮಾರ ಅವರ ಮನೆ ಇರುತ್ತದೆ. ನಮ್ಮ ಮನೆಯಿಂದ 2 ಓಣಿ ಆದ ನಂತರ ಉದಯ ಕುಮಾರ ಅವರ ಮನೆ ಇದೆ. ಚಾಸಾ-18 ಕಿರಣ್ ಬಂಡಿವಡ್ಡರ ನನಗೆ ಗೊತ್ತಿರುತ್ತಾರೆ. ಚಾಸಾ-19 ಮಂಜುನಾಥ ಮನ್ನೂರ್, ಚಾಸಾ-20 ಈರಣ್ಣಾ ನೀಲಪ್ಪನವರ ನಮ್ಮ ಓಣಿಯವರು. ಚಾಸಾ -21 ಆನಂದ ನನ್ನ ಅಕ್ಕನ ಮಗ. ಚಾಸಾ-22 ಸಂತೋಷ ನನ್ನ ತಂಗಿ ಮಗ. ಚಾಸಾ -23 ರಿಂದ ಚಾಸಾ -25 ರವರು ನನಗೆ ಪರಿಚಯ ಇರುತ್ತಾರೆ.

2. ವಿಡಿಯೋ ಕಾನ್ಫರನ್ಸ್ ಮೂಲಕ ವಿಚಾರಣೆಗೆ ಹಾಜರಾಗಿರುವ 1 ನೇ, 2 ನೇ ಮತ್ತು 3 ನೇ ಆರೋಪಿತರನ್ನು ನಾನು ನೋಡಿರುವುದಿಲ್ಲ. 4 ನೇ ಮತ್ತು 5 ನೇ ಆರೋಪಿತರನ್ನು ಮಾತ್ರ ನೋಡಿರುತ್ತೇನೆ. 6 ನೇ ಮತ್ತು 7 ನೇ ಆರೋಪಿತರನ್ನು ನಾನು ನೋಡಿರುವುದಿಲ್ಲ.

3. ನನ್ನ ಮಗ ರವಿ ತಿಮ್ಮಣ್ಣವರ ಕೊಲೆ ಆಗಿರುತ್ತದೆ. ಈಗ ನನ್ನ ಮಗನ ಕೊಲೆ ಒಂದೂವರೆ ವರ್ಷ ಆಗಿರುತ್ತದೆ. ಒಂದೂವರೆ ವರ್ಷಗಳ ಹಿಂದೆ ರಾತ್ರಿ 10.30 ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆನು. ನನ್ನ ಮಗನನ್ನು ಊಟಕ್ಕೆ ಕರೆಯಲು ನಮ್ಮ ಊರಿನ ಶಾಲೆಯ ಬಳಿ ಹೋಗಿದ್ದೆನು, ಅಲ್ಲಿ ಸಾಕಷ್ಟು ಜನ ಸೇರಿದ್ದರು. ಶಾಲೆಯಲ್ಲಿ ಲೈಟ್ ಇರಲಿಲ್ಲ. ನನ್ನ ಮಗ ಬಂದು ನನ್ನ ಮುಂದೆ ಬಿದ್ದನು. ನನ್ನ ಮಗನ ಮೈತುಂಬ ಚುಚ್ಚಿದ್ದ ಗಾಯ ಆಗಿತ್ತು, ರಕ್ತ ಬರುತ್ತಿತ್ತು. ನನ್ನ ಮುಂದೆ ಬಿದ್ದ ಕೂಡಲೆ ಅವನ ಪ್ರಾಣ ಹೋಯಿತು. ನಾನು ನನ್ನ ಮಗನನ್ನು ನೋಡಿಕೊಂಡು ಅಲ್ಲೆ ಕುಳಿತೆನು. ನನ್ನ ತಂಗಿಯ ಮಗ ಸಂತೋಷ ಟಾಟಾ ಏಸ್ ತಂದು ನನ್ನ ಮಗನನ್ನು ಮತ್ತು ನನ್ನನ್ನು ಬೈಲಹೊಂಗಲದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದನು. ನಾನು ನನ್ನ ಹೆಣ್ಣು ಮಕ್ಕಳಿಗೆ ವಿಚಾರ ತಿಳಿಸಿದೆನು. ನನ್ನ ಹೆಣ್ಣು ಮಕ್ಕಳು ಅದೇ ದಿನ ರಾತ್ರಿ ಬಂದು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. ನಾನು ಪೊಲೀಸರಿಗೆ ಏನು ಹೇಳಿರುವುದಿಲ್ಲ. ನಾನು ಸಹಿ ಮಾತ್ರ ಮಾಡಿದ್ದೇನೆ. ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು. ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮಗನಿಗೆ ಯಾರು ಏನು ಮಾಡಿದರು ಎಂದು ನನಗೆ ಗೊತ್ತಾಗಲಿಲ್ಲ. ಅಲ್ಲಿ ಸಾಕಷ್ಟು ಜನರು ಸೇರಿದ್ದರು. ನಾನು ದೂರು ಕೊಟ್ಟ ನಂತರವು ಸಹ ನನ್ನ ಮಗನಿಗೆ ಏನಾಯಿತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ದೂರು ಕೊಟ್ಟಾಗ ನನ್ನ ಮಗನ ಶವ ಆಸ್ಪತ್ರೆಯಲ್ಲಿ ಇತ್ತು. ಆಸ್ಪತ್ರೆಗೆ ಪೊಲೀಸರು ಭೇಟಿ ನೀಡಿದ್ದರು. ಆಸ್ಪತ್ರೆಯಲ್ಲಿ ಪೊಲೀಸರು ಏನು ಮಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮಗನ ಶವವನ್ನು ಶವಾಗಾರಕ್ಕೆ ತೆಗೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಸಹಿ ತೆಗೆದುಕೊಂಡ ಬಗ್ಗೆ ನನಗೆ ನೆನಪಿರುವುದಿಲ್ಲ. ಸಾಕ್ಷಿ ಕಣ್ಣೀರು ಹಾಕಿ ಸಾಕ್ಷ್ಯ ನುಡಿಯುತ್ತಿದ್ದಾರೆ.

4. ಶವ ಪಂಚನಾಮೆಯ ಮೇಲೆ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಶವ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಸಮಯದಲ್ಲಿ ತೆಗೆಯಲಾದ ತಮ್ಮ ಮಗನ ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಪೋಟೋಗಳು ವಿದ್ಯುನ್ಮಾನ ದಾಖಲೆಗಳಾಗಿದ್ದು, ಅವುಗಳ ಗುರುತಿಸುವಿಕೆಗೆ ಭಾರತ ಸಾಕ್ಷ್ಯ ಅಧಿನಿಯಮ ಕಲಂ 63(4) ರಡಿ ಪ್ರಮಾಣಪತ್ರ

ಸಲ್ಲಿಸಿರುವುದರಿಂದ ಪೋಟೋಗಳನ್ನು ಕ್ರಮವಾಗಿ ನಿಪಿ–3, ನಿಪಿ–4, ನಿಪಿ–5 ಮತ್ತು ನಿಪಿ–6 ಎಂದು ಗುರುತಿಸಲಾಯಿತು. ಮರು ದಿನ ನಮ್ಮ ಊರಿನ ಶಾಲೆಯ ಹತ್ತಿರ ಪೊಲೀಸರು ಬಂದಿದ್ದರು. ಶಾಲೆಯ ಹತ್ತಿರ ಹುಡುಕಾಡುತ್ತಿದ್ದರು. ಆ ಸ್ಥಳದಲ್ಲಿ ನನ್ನ ಸಹಿ ಮಾಡಿಸಿಕೊಂಡಿರುವುದಿಲ್ಲ. ಪೊಲೀಸರಿಗೆ ಶಾಲೆಯ ಸ್ಥಳ ಮತ್ತು ನನ್ನ ಮಗ ಬಿದ್ದಿದ್ದ ಸ್ಥಳವನ್ನು ಯಾರು ತೋರಿಸಿದರೆಂದು ನನಗೆ ಗೊತ್ತಿರುವುದಿಲ್ಲ. ಅಲ್ಲಿ ಬಹಳ ಜನ ಇದ್ದರು. ಸ್ಥಳದಲ್ಲಿ ಒಂದು ಕಲ್ಲು ಬಿದ್ದಿತ್ತು, ಅದಕ್ಕೆ ರಕ್ತ ಅಂಟಿತ್ತು ಮತ್ತು ನೆಲದ ಮೇಲೆ ರಕ್ತ ಬಿದ್ದಿತ್ತು. ಪೊಲೀಸರು ಅದನ್ನು ಗುರುತು ಮಾಡಿದ್ದರು , ರಕ್ತವನ್ನು ಹತ್ತಿಯಿಂದ ಒರೆಸಿ ತೆಗೆದರು ಮತ್ತು ಪೋಟೋ ತೆಗೆದರು. ಆ ಪೋಟೋವನ್ನು ನೋಡಿದರೆ ಈಗ ಗುರುತಿಸುತ್ತೇನೆ. 6 ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಕ್ರಮವಾಗಿ ನಿಪಿ–7 ರಿಂದ ನಿಪಿ–12 ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ. ಪೊಲೀಸರು 2 ಬಾರಿ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ. ಪೊಲೀಸರ ಮುಂದೆ ಬಿಟ್ಟು ಬೇರೆ ಎಲ್ಲಿಯು ನಾನು ಹೇಳಿಕೆ ನೀಡಿರುವುದಿಲ್ಲ. ಕೃತ್ಯ ನಡೆದ ದಿನ ನನ್ನ ಮಗ ಧರಿಸಿದ್ದ ಬಟ್ಟೆಯನ್ನು ನಾನು ನೋಡಿದಲ್ಲಿ ಗುರುತಿಸುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.